**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.448/2023**

**CW -7 PW-6**

| | | |
|---|---|---|
| ಸಾಕ್ಷಿದಾರಳ ಹೆಸರು | ಃ | ಮರೀಯಮ್ಮ |
| ಗಂಡ | ಃ | ಬಸ್ಸಪ್ಪ |
| ವಯಸ್ಸು | ಃ | 63 |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ಗಣೇಕಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **19-02-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ನನ್ನ ಅಳಿಯ, ಚಾಸಾ-4 ಮತ್ತು 5 ಸಂಬಂಧಿಕರು, ಚಾಸಾ-6 ನನ್ನ ಮಗಳು, ಚಾಸಾ-8 ನನ್ನ ಮಗ. ಆರೋಪಿತರು ಗೊತ್ತು. ಈಗ 3 ವರ್ಷಗಳ ಹಿಂದೆ ಗಣೇಕಲ್ ಜಾತ್ರೆಯ ಸಂದರ್ಭದಲ್ಲಿ, ಮನೆಯಲ್ಲಿ ನಾನು, ನನ್ನ ಮಗ ಮಗಳು, ಅಳಿಯ ಮತ್ತು ಮೊಮ್ಮಕ್ಕಳು ಇದ್ದಾಗ ಜಾತ್ರೆಯ ಮರುದಿನ ನಾವೇಲ್ಲರು ಮನೆಯಲ್ಲಿ ಇದ್ದಾಗ ಬೆಳಿಗ್ಗೆ 09-30 ರ ಸುಮಾರಿಗೆ ಆರೋಪಿತರು ಏಕಾಏಕಿ ಮನೆಯ ಒಳಗೆ ಬಂದು ನನ್ನ ಮಗ ನಾಗರಾಜನಿಗೆ 2 ನೇ ಆರೋಪಿ ಮಲ್ಲಿಕಾರ್ಜುನ್ ತನ್ನ ಎಡಗಾಲು ಚಪ್ಪಲಿಯಿಂದ ನಾಗರಾಜನಿಗೆ ಮೈತುಂಬಾ ಹೊಡೆದಿರುತ್ತಾನೆ ನಾನು ಬಿಡಿಸಲು ಹೋದಾಗ 1 ಮತ್ತು 3 ನೇ ಆರೋಪಿತರು ನನ್ನ ಕೂದಲು ಮತ್ತು ಸೇರಗನ್ನು ಹಿಡಿದು ಎಳೆದಾಡಿ ಸೂಳೆ ಎಂದೆಲ್ಲಾ ಅವಾಚ್ಯವಾಗಿ ಬೈದು ಪ್ರಾಣ ಬೇದರಿಕೆ ಹಾಕಿರುತ್ತಾರೆ. ಸದರಿ ಘಟನೆಯ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೇ ಇರುವ ಎಡಗಾಲಿನ ಚಪ್ಪಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ಮು.ಮಾ 1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು:- ಆರೋಪಿತರ ಪರ ಶ್ರೀ. ವಿ.ಡಿ.ಸಿ ವಕೀಲರಿಂದ.**

ನಾನು ಬೆಂಗಳೂರಿಗೆ ದುಡಿದು ತಿನ್ನಲು ಹೋಗಿರುತ್ತೇವೆ. ಎನ್. ಗಣೇಕಲ್ ಗ್ರಾಮದ ಮನೆಯಲ್ಲಿ ಯಾರು ಇರುವುದಿಲ್ಲ, ಜಾತ್ರೆಗಾಗಿ ಬಂದಿದ್ದೆವು. 1 ನೇ ಆರೋಪಿ ಪಾರ್ವತಿ ಮತ್ತು ನಾಗರಾಜನ ವಿವಾಹ ಆಗಿ ಘಟನೆಯ ಪೂರ್ವದಲ್ಲಿ 3-4 ವರ್ಷ ಆಗಿತ್ತು. ಪಾರ್ವತಿಗೆ ಓರ್ವ ಮಗನಿರುತ್ತಾನೆ. 1 ನೇ ಆರೋಪಿ ಗಂಡನ ಮನೆ ಬಿಟ್ಟು ತವರು ಮನೆಗೆ ಹೋಗಲು

ಕಾರಣ ಏನು ಎಂಬ ಪ್ರಶ್ನೆಗೆ ಗಂಡ ಬೇಡ ಎಂದು ತವರು ಮನೆಗೆ ಹೋಗಿರುತ್ತಾಳೆ. ನಾವು 1 ನೇ ಆರೋಪಿಗೆ ಅನುಮಾನ ಪಟ್ಟು ಅವಳಿಗೆ ನಾವೇಲ್ಲರೂ ಹೊಡೆ ಬಡೆ ಮಾಡಿದ್ದರಿಂದ ತವರು ಮನೆಗೆ ಹೋಗಿರುತ್ತಾರೆ ಅಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-8 ರವರ ವಿರುದ್ಧ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದ್ದು, ಜೀವನಾಂಶ ನೀಡುವಂತೆ ನ್ಯಾಯಾಲಯ ಆದೇಶ ಮಾಡಿರುತ್ತದೆ ಅಂದರೆ ಸರಿ. ಚಾಸಾ-8 ಸರಿಯಾಗಿ ಪ್ರತಿ ತಿಂಗಳು ಜೀವನಾಂಶದ ಹಣ ನೀಡುತ್ತಿರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಆರೋಪಿ ಖಾತೆಗೆ ಪ್ರತಿ ತಿಂಗಳು ಹಣ ಜಮಾ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಚಾಸಾ-8, 1 ನೇ ಆರೋಪಿಗೆ ಜೀವನಾಂಶ ನೀಡದೇ ಬೆಂಗಳೂರಿಗೆ ಹೋಗಿದ್ದ ಎಂದರೆ ಸರಿಯಲ್ಲ.

1 ನೇ ಆರೋಪಿತಳು ಸಹ ಜಾತ್ರೆಗೆ ಬಂದಿದ್ದಳು ಅಂದರೆ ಸಾಕ್ಷಿ ಜಾತ್ರೆ ಆದ ಮರು ದಿನ ಬಂದಿದ್ದಳು ಎಂದು ನುಡಿಯುತ್ತಾರೆ. ಆರೋಪಿತರು ಮನೆಗೆ ಬಂದಾಗ ನಾನು ಮನೆಯ ಒಳಗೆ ಇದ್ದೆ. ಆಗ ಮನೆಯಲ್ಲಿ ನನ್ನ ಕುಟುಂಬದವರೆಲ್ಲರೂ ಇದ್ದೇವು. 1 ನೇ ಆರೋಪಿ ಚಾಸಾ-8 ರವರ ವಿರುದ್ಧ ಹಣ ನೀಡುವಂತೆ ತಂಟೆ ತೆಗೆದಿರುತ್ತಾಳೆ. ಆಗ ನಾನು ಹಣ ಬೇಕಾದಲ್ಲಿ ಮನೆಗೆ ಬಂದು ಮಾವನವರನ್ನು (2 ಮತ್ತು 3 ನೇ ಆರೋಪಿತರು) ಕರೆದುಕೊಂಡು ಬಂದು ಹಣ ತೆಗೆದುಕೊಂಡು ಹೋಗು ಎಂದು ನಾನು ಹೇಳಿರುತ್ತೇನೆ. ಮೊದಲು 1 ನೇ ಆರೋಪಿ ಮನೆಗೆ ಬಂದು ತಂಟೆ ತೆಗೆದಿದ್ದು ನಂತರ 2 ಮತ್ತು 3 ನೇ ಆರೋಪಿತರು ಬಂದಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿ 09-30 ಕ್ಕೆ ಮನೆಗೆ ಬಂದಿದ್ದು 2 ಮತ್ತು 3 ನೇ ಆರೋಪಿತರು ಮಧ್ಯಾಹ್ನ 12-00 ಗಂಟೆಯ ನಂತರ ಬಂದಿರುತ್ತಾರೆ. ಘಟನೆ ಮನೆಯ ಹೊರಗಡೆ ಆಗಿರುತ್ತದೆ.

1 ಮತ್ತು 3 ನೇ ಆರೋಪಿತರು ನನ್ನ ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ. ಕೂದಲು ಹಿಡಿದು ಎಳೆದಾಡಿದ್ದರಿಂದ ನನಗೆ ನೋವಾಗಿರುತ್ತದೆ ಹಾಗೂ ಕೂದಲು ಹರಿದಿರುತ್ತವೆ. ಘಟನೆ ಸಂದರ್ಭದಲ್ಲಿ ಹೊರಗಿನವರು ಅಂದಾಜು 20 ಜನ ಸೇರಿದ್ದರು. ಹೊರಗಿನವರು ಜಗಳ ಬಿಡಿಸಿರುತ್ತಾರೆ ಅವರು ಯಾರು ಎಂದು ಹೇಳಲು ಬರುವುದಿಲ್ಲ. 1 ನೇ ಆರೋಪಿತಳು ತನ್ನ ಗಂಡನನ್ನು ಜೀವನಾಂಶದ ಹಣ ಕೇಳಿರುತ್ತಾಳೆ ಅಂದರೆ ಸಾಕ್ಷಿ ಜಗಳ ಮಾಡಿ ಕೇಳಿರುತ್ತಾಳೆ ಎಂದು ನುಡಿಯುತ್ತಾರೆ. ನಾವು ಆರೋಪಿತರಿಗೆ ಹೊಡೆದಿರುತ್ತೇವೆ

ಅಂದರೆ ಸರಿಯಲ್ಲ. ಆರೋಪಿತಳು ನಮ್ಮ ವಿರುದ್ಧ ಪ್ರಕರಣ ದಾಖಲಿಸಿರುತ್ತಾಳೆ. 4 ನೇ ಆರೋಪಿ ವಕೀಲರನ್ನು ಕರೆದುಕೊಂಡು 1 ನೇ ಆರೋಪಿ ಪ್ರಕರಣ ದಾಖಲಿಸಿರುತ್ತಾರೆ ಅಂದರೆ ಸರಿ. ಸದರಿ 4 ನೇ ಆರೋಪಿ ನಮ್ಮ ಕುಲಸ್ಥನಾಗಿರುತ್ತಾನೆ ಅಂದರೆ ಸರಿ. 1 ನೇ ಆರೋಪಿ ನಮ್ಮ ವಿರುದ್ಧ ಪ್ರಕರಣ ದಾಖಲಿಸಿದ್ದರಿಂದ ಅದಕ್ಕೆ ಪ್ರತಿಯಾಗಿ ವಕೀಲರನ್ನು ಸೇರಿಸಿಕೊಂಡು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ನಾನು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

ಘಟನಾ ಸ್ಥಳದ ಚಕ್ ಬಂದಿ ಹೇಳಲು ಬರುವುದಿಲ್ಲ. ಘಟನೆ ಯಾದ 2 ದಿನಗಳ ನಂತರ ನಾನು ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಚಪ್ಪಲಿ ಎಲ್ಲ ಕಡೆ ದೊರೆಯುತ್ತವೆ ಅಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರು ಆರೋಪಿತರ ವಿರುದ್ದ ಚಾಸಾ-1 ಮತ್ತು 8 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.